ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, the 5th July 1977/Ashada, 4, 1899 S.E.

The House met in the Assembly Chamber, Vidhana Soudha, at Twelve of the Clock.

[MADAM SPEAKER (SMT. K. S. NAGARATHNAMMA) in the Chair]

CALLING ATTENTION TO MATTERS OF URGENT PUBLIC IMPORTANCE

(i) *re : Scarcity of drinking water in villages of Sindgi Taluk*

SRI S. Y. PATIL (Sindgi).—I call the attention of the Minister for Rural Development and Panchayat Raj to the acute scarcity of drinking water in Devarhippargi, Devoor, Manur and Rampur villages in Sindgi Taluk.

SRI K. PRABHAKAR (Minister for Rural Development and Panchyat Raj).—I wist to make the following Statement:—

The drinking water supply position in (i) Devar Hippargi, (ii) Devur, (iii) Mannur and (iv) Rampur of Sindgi Taluk. Bijapur District, is indicated below —

Devar Hippargi,—There is a bore well near Panchayat's office in the village which has been fitted with a power pump. The people living round about this well are drawing water from this well. It is stated that sufficient water is available in this well during night time and due to low voltage in day time water could not be lifted from this bore well. Further, there are 2 more bore wells sunk in the village which are fitted with hand pumps One well is located in Harijankeri and the Harijans are using water from this bore well. The water level in the other bore well has gone down and hence no water is available for use from this well. In addition to the above three bore wells there are 10 open drinking water wells in the village but water in all the wells has gone down and the villagers are using available water available from these wells too during the morning hours. How a pit well has been dug in addition to one such well already dug during the last scarcity period, Water is available in these wells and peoplo are using the water available from these wells

too, Arrangements have also been made to supply drinking water to this village through two tankers to solve the drinking water problem. One high speed rig of 6"-diameter has been shifted from Bijapur Taluk and the Assistant Engineer, P,H.E. Sub Division, Muddebihal has been directed to sink two bore wells. Thus there will be no problem of drinking water in this village.

Devur.—Though there is one open Drinking water well and one pit well in this village from which the people are getting water it is stated that the water in these two wells is not sufficient and particularly to the Harijans there is problem of drinking water. In order to mitigate the hardship caused to the villagers two tankers have been kept in the village and water is being supplied through trucks drawn from private wells. Action is also being taken to sink two more bore wells in the village in addition to the three wells having failed.

Mannur.—Drinking water is being provided to the villagers through pipes under the National Rural Water Supply and Sanction Scheme. Due to failure of rains during last year the water table of the well which is the source for the NRWS and Sanitation scheme, has gone down and water is available for only about two hours every day. In addition to the above, one more bore well has been sunk in the village and the same has been fitted with a power pump, but the pump is not in working condition. However, water is being made available to this village through two tankers by drawing water from private wells through trucks. Two more bore wells are going to be sunk.

Rampur.—It is stated that sufficient water is available in this village in the open Drinking water well, a bore well and a Pit well sunk in the village. There is no problem of drinking water in this village as intimated by the Deputy Commissioner,

Thus, it can be stated that Government has take keen action to provide drinking water to the villages cited. Arrangements will also be mede to make available 2 high speed rigs to Sindgi Taluk so that bore wells may be sunk in the needy villages.

ಶ್ರೀ ಎಸ್. ಪೈ, ಪಾಟೀರ್.—ಬೇಸಿಗೆಯಲ್ಲಿ ನೀರಿನ ಅಭಾವವಿದ್ದು, ಆ ಊರಿನಲ್ಲಿ 7 ಸಾವಿರ ಜನರಿದ್ದಾರೆ. ಅದು ಹೆಸ್ಸೂರು ಇರುವ ಸ್ಥಳ. ಪ್ರತಿನಿತ್ಯ ಸಾವಿರಾರು ಬಸ್ಸುಗಳು ಬರುವ ಸ್ಥಳ. ದೇವೂರು ಬಗ್ಗೆ ನೀರಿನ ಅಭಾವ ಜಾಸ್ತಿ ಇದ್ದು ಅಲ್ಲಿ ಸಿಂಪ್ಲಿಫೈಡ್ ಸ್ಕೀಂನ್ನು ಜಾರಿಗೆ ತರಬೇಕು ಮಾನ್ಯ ಮಂತ್ರಿಗಳು ಅದನ್ನು ಖುದ್ದು ನೋಡಿದ್ದಾರೆ. ಇದರ ಬಗ್ಗೆ ಅಧಿಕಾರಿಯು ಜಿಲ್ಲಾಧಿಕಾರಿಯವರಿಗೂ ತಿಳಿಸಲಾಗಿದೆ. ಮಣ್ಣೂರು ಬಗ್ಗೆ ಪ್ರಸ್ತಾಪವಾಯಿತು, ರಾಮಪುರ ಬಗ್ಗೆ ಸರ್ಕಾರ ಏನು ರಿಪೋರ್ಟ್ ಕೊಟ್ಟಿದೆ ಅದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳು ಅಲ್ಲಿನ ನೀರಿನ ಅಭಾವ ಪರಿಸ್ಥಿತಿಯನ್ನು ನೋಡಿದ್ದಾರೆ. ಅಲ್ಲಿ ಸಿಂಪ್ಲಿಫೈಡ್ ಸ್ಕೀಂನ್ನು ಜಾರಿಗೆ ತರಬೇಕಾದರೆ 1,30,000 ರೂಪಾಯಿಗಳು ಬೇಕಾಗುತ್ತದೆ. ಅದರಲ್ಲಿ 50 ಸಾವಿರ ರೂಪಾಯಿಗಳನ್ನು

ವಂತಿಕೆ ರೂಪದಲ್ಲಿ ಗ್ರಾಮದವರು ಕೊಡಬೇಕು. ಇದುವರೆಗೆ 5 ಸಾವಿರ ರೂಪಾಯಿಗಳು ಗ್ರಾಮಸ್ಥರಿಂದ ವಸೂಲು ಮಾಡಲಾಗಿದೆ. 8,000 ರೂಪಾಯಿಗಳನ್ನು ಪಿ.ಎಚ್.ಇ. ಯವರು ಸೂಚ್ಯದ್ದಾರೆ. ಆದ್ದರಿಂದ ಅಲ್ಲಿರುವ ನೀರಿನ ಅಭಾವವನ್ನು ಗಮನಿಸಿ ಅಲ್ಲಿ ಸಿಂಪ್ಲಿಫೈಡ್ ಸ್ಕೀಂನ್ನು ಕರ್ಕರ ಮಂಜೂರು ಮಾಡುತ್ತದೆಯೇ?

ಶ್ರೀ ಕೆ. ಪ್ರಭಾಕರ್.—ನಾನು ಇಲ್ಲಿ ತಿಳಿಸಿದ ನಾಲ್ಕು ಗ್ರಾಮಗಳ ಪೈಕಿ ಒಂದು ಊರಿನಲ್ಲಿ ನೀರಿನ ಸಮಸ್ಯೆ ಇಲ್ಲವೆಂದು ಮಾನ್ಯ ಸದಸ್ಯರೇ ಒಪ್ಪಿಕೊಂಡಿದ್ದಾರೆ. ಇನ್ನೂ 3 ಗ್ರಾಮಗಳ ಪೈಕಿ ರಾಮಪುರ ವಿಚಾರವನ್ನು ನಾನೇ ಖುದ್ದಾಗಿ ನೋಡಿದ್ದೇನೆ. ಜನಗಳು ಕೊಡತಕ್ಕಂಥ ಭಾಗದ ದುಡ್ಡು ಏನಿದೆ ಅದನ್ನು ಕೊಡಿಸುವುದಾಗಿ ಮಾನ್ಯ ಸದಸ್ಯರು ಆ ಸ್ಥಳದಲ್ಲೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಜನಗಳು ಕೊಡತಕ್ಕಂಥ ಅವರ ಭಾಗದ ದುಡ್ಡನ್ನು ಕೊಟ್ಟರೆ ಉಳಿದ ಹಣ ಎಷ್ಟೇ ಖರ್ಚಾಗಲಿ ಅದನ್ನು ಸರ್ಕಾರ ವಹಿಸಿಕೊಂಡು ಈ ಯೋಜನೆಯನ್ನು ಪೂರ್ಣಗೊಳಿಸುತ್ತದೆ ಮತ್ತು ದೇವೂರು ಇಪ್ಪರಿಗಿ ವಿಚಾರದಲ್ಲಿ ಅಲ್ಲಿ 10 ಬಾವಿಗಳಿದ್ದರೂ ಕೂಡ ನೀರಿನ ಮಟ್ಟ ಕೆಳಕ್ಕೆ ಹೋಗುತ್ತಿರುವುದರಿಂದ ಅಲ್ಲಿ ನೀರಿನ ತೊಂದರೆ ಇದೆ. ಇದನ್ನು ತಿಳಿದೇ ಈಗ ನೀರನ್ನು ಅವರಿಗೆ ಟ್ಯಾಂಕರ್ಸ್ ಮೂಲಕ ಅಂದರೆ ಪಿಪಾಯಿಗಳ ಮೂಲಕ ಒದಗಿಸುವ ಏರ್ಪಾಡನ್ನು ಮಾಡಿದ್ದೇವೆ. ಆದರೆ ಖಾಯಂ ಆಗಿ ನೀರಿನ ತೊಂದರೆ ಏನಿದೆ ಅದನ್ನು ನಿವಾರಣೆ ಮಾಡುವುದರ ಬಗ್ಗೆ ಇನ್ನೂ ಬಾವಿಗಳನ್ನು ತೆಗೆಯುತ್ತಿದ್ದೇವೆ ಎನ್ನುವುದನ್ನು ಈಗಾಗಲೇ ತಿಳಿಸಿದ್ದೇನೆ. ಇನ್ನೂ 23 ಗ್ರಾಮಗಳಲ್ಲಿ ಸಿಂಪ್ಲಿಫೈಡ್ ಸ್ಕೀಂನ ಬಗ್ಗೆ ಹೇಳುವುದಾದರೆ, ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಅದರ 1/10 ಭಾಗವನ್ನು ಆ ಭಾಗದ ಜನರು ಕೊಡಬೇಕು. ಈ ಸಿಂಪ್ಲಿಫೈಡ್ ಸ್ಕೀಂನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಾದರೆ ಅದರ 80 ಭಾಗದಲ್ಲಿ 1/8 ಭಾಗವನ್ನು ಆ ಭಾಗದ ಜನರು ಕೊಡಬೇಕು. ದಾವಾಷ ಪ್ರಕಾರ ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ತಮ್ಮಲ್ಲೂ ಇರಬೇಕು. ಒಂದೆರಡು ಕಡೆ ಪಂಚಾಯತಿಯಲ್ಲಿ ದುಡ್ಡಿಲ್ಲವೆಂದು, ಆ ಭಾಗದ ಹಣವನ್ನು ಸರ್ಕಾರದವರೇ ಕೊಡಿ ಎಂದು ಹೇಳಿದರೆ ಸರ್ಕಾರದವರು ಕೊಡುವುದಕ್ಕಾಗುವುದಿಲ್ಲ? ಆದರೆ ತೀರ ಕಷ್ಟ ಇರುವ ಒಂದೆರಡು ಗ್ರಾಮಗಳಲ್ಲಿ ಅಸೆಸ್‌ಮೆಂಟ್ ಮಾಡಿ ಅಲ್ಲಯ ಆದಾಯ ಎಲ್ಲ ಸೇರಿ ಶೇಕಡಾ 10 ಇರುವುದಾದರೆ ಅಂತಹ ಕಡೆ ಸರ್ಕಾರ ದುಡ್ಡು ಕೊಟ್ಟು ಆ ಮೇಲೆ ಪಂಚಾಯತಿಯವರು ವಾಪಸ್ಸು ಕೊಡುವ ರೀತಿಯಲ್ಲಿ ರೆವಿನ್ಯೂ ಇಲಾಖೆಯಿಂದ ವಿಭಾಗಾಧಿಕಾರಿಗಳ ಮುಖಾಂತರವಾಗಿ ಮಾಡಿಸಿಕೊಟ್ಟಿದ್ದೇವೆ. ಆದರೆ ಎಲ್ಲಾ ಗ್ರಾಮಗಳಿಗೂ ಈ ತತ್ವವನ್ನು ಅನ್ವಯಿಸುವುದಕ್ಕೆ ಕಷ್ಟವಾಗುತ್ತದೆ. ರಾಮಪುರದ ವಿಷಯವಾಗಿ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾನು ಖುದ್ದು ನೋಡಿ ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಅದನ್ನು ಬಗೆಹರಿಸಿದ್ದೇನೆ. ಮಾನ್ಯ ಸದಸ್ಯರು ಆ ಭಾಗದ ಜನರು ನೀರಿನ ತೊಂದರೆಯನ್ನು ನೀಗುವುದಕ್ಕೆ ಉದಾರವಾಗಿ ದುಡ್ಡನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಈ ಮೇರೆಗೆ ಸ್ಥಳದಲ್ಲಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ ಒಂದು ವೇಳೆ ಇರುವ ಬಾವಿಗಳಲ್ಲಿ ನೀರು ಸಾಲದೆ ಹೋದರೆ ಪಕ್ಕದಲ್ಲಿರತಕ್ಕಂಥಹ ಪಿ.ಡಬ್ಲ್ಯು.ಡಿ ಕಾಲೋನಿಯಲ್ಲಿ ಇರುವ ಬಾವಿಯಿಂದ ನೀರನ್ನು ಒದಗಿಸಿಕೊಡುವ ಏರ್ಪಾಡು ಮಾಡಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಆದರೆ ಜನಗಳ ಭಾಗದ ದುಡ್ಡನ್ನು ಕೊಡಿಸಿ ಕೊಡುವ ವ್ಯವಸ್ಥೆಯನ್ನು ಮಾನ್ಯ ಸದಸ್ಯರು ಮಾಡಬೇಕು 23 ಗ್ರಾಮಗಳಲ್ಲಿ ಏನು ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆ 23 ಗ್ರಾಮಗಳ ಜನಗಳಿಂದ ಬರಬೇಕಾದ ಹಣವನ್ನು ಜಾಗ್ರತೆಯಾಗಿ ಕೊಡಿಸಿಕೊಟ್ಟರೆ 23 ಗ್ರಾಮ ಬಾವಿಗಳನ್ನು ಕೂಡ ಮಾಡಿಕೊಡುತ್ತೇವೆ. ಹಂತ ಹಂತವಾಗಿ ಆ ಗ್ರಾಮಗಳಲ್ಲಿ ಇರುವ ನೀರಿನ ತೊಂದರೆ ಏನಿದೆ ಅದಕ್ಕನುಸಾರವಾಗಿ ಈ ನೀರಿನ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಪೈ. ಪಾಟೀಲ್ —ದೇವೂರು ಒಂದಕ್ಕಾದರೂ ಮಾಡಿಕೊಡಿ, ಅಲ್ಲಿ ಹರಿಜನರೇ ಹೆಚ್ಚಿಗೆ ಇದ್ದಾರೆ. ಅವರು 15–20 ದಿವಸಕೊಮ್ಮೆ ಸ್ನಾನ ಮಾಡುತ್ತಿದ್ದಾರೆ. 2 ಮೈಲಿಯಿಂದ ನೀರನ್ನು ತರತಕ್ಕಂಥ ಪರಿಸ್ಥಿತಿ ಅಲ್ಲಿದೆ. ಆ ಊರಿನಲ್ಲಿ ಅವರ ಜೀವನದಲ್ಲಿ ಕಾಂಟ್ರಿಬ್ಯೂಷನ್ ಕೊಡುವ ಶಕ್ತಿ ಅವರಲ್ಲಿಲ್ಲ.

ಶ್ರೀ ಕೆ. ಪ್ರಭಾಕರ್.—ಶೇಕಾಡ 50 ಭಾಗಕ್ಕಿಂತ ಹರಿಜನ ಗಿರಿಜನರು ಇದ್ದರೆ, ಪಂಚಾಯಿತಿ ವಂತಿಗೆಯನ್ನು ಕಾಯ್ದೆ ಅಲ್ಲ ಬೇಗ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದ ಕಾನೂನು ಇದೆ, ಅದಕ್ಕನುಸಾರವಾಗಿ ನಾವು ತೆಗೆದುಕೊಳ್ಳಬಹುದು. ಒಂದು ವೇಳೆ ಜನಸಂಖ್ಯೆ ಕಡಿಮೆ ಇದ್ದು, ಸರ್ಕಾರದಿಂದ ಎಲ್ಲಾ ಖರ್ಚನ್ನು ಕೊಡಬೇಕೆಂದು ಹೇಳಿದರೆ ಪಂಚಾಯಿತಿಯವರು ಜಾಮೀನು ಕೊಡತಕ್ಕಂಥಾದ್ದು ಇದೆ. ಇದನ್ನು ಹಂತ ಹಂತವಾಗಿ ಸರ್ಕಾರದವರು ಮಾಡುವುದಕ್ಕೆ ನಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಮಾಡುತ್ತೇನೆ.

(*ii*) *re* ; *Drought Conditions in Magadi Taluk*

ಶ್ರೀ ಬೆಟ್ಟಸ್ವಾಮಿ ಗೌಡ (ಕುದೂರು),—ಈಗ ಮಾಗಡಿ ತಾಲ್ಲೂಕಿನಲ್ಲಿ ಹೋದ ವರ್ಷ ಬೆಳೆಯಾಗದೆ ಅಭಾವ ಪರಿಸ್ಥಿತಿ ಬಂದಿದ್ದು, ರೈತರು ಸಹಕಾರಿ ಸಂಘಗಳಿಂದ ಸಾಲ ಸೋಲಗಳನ್ನು ತೆಗೆದುಕೊಂಡಿರುವುದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎನ್. ಹುಚ್ಚಪ್ಪಗೌಡ (ಕಂದಾಯಮಂತ್ರಿಗಳು).—ಈ ಗಮನ ಸೆಳೆಯುವ ಸೂಚನೆಗೆ ನನ್ನ ಹೇಳಿಕೆ ಈ ರೀತಿ ಇದೆ.—

ಮಾನ್ಯ ಅಧ್ಯಕ್ಷಣಿಯರೆ.

1976-77ನೇ ಸಾಲಿನಲ್ಲಿ ರಾಜ್ಯದ ಅನೇಕ ಭಾಗಗಳಲ್ಲಿ ಸಕಾಲಕ್ಕೆ ಹಾಗೂ ಸಾಕಷ್ಟು ಮಳೆಯಾಗದೆ ಕ್ಷಾಮ ಪರಿಸ್ಥಿತಿ ತಲೆದೋರಿತು. ಆದರೆ ಮಾಗಡಿ ತಾಲ್ಲೂಕಿನಲ್ಲಿ ಮೊದಮೊದಲು ಅಂತಹ ಅಭಾವದ ಕುರುಹುಗಳು ಕಂಡು ಬರಲಿಲ್ಲ. ಸರ್ಕಾರವು ಖುದ್ದು ಮಾನ ಪರಿಸ್ಥಿತಿಯನ್ನು ಪದೇ ಪದೇ ವಿಮರ್ಶೆ ಮಾಡುತ್ತಿದ್ದಾಗ ಮಾಗಡಿ ತಾಲ್ಲೂಕು ಸಹ ಕ್ರಮೇಣ ಅಭಾವ ಪರಿಸ್ಥಿತಿಗೆ ಒಳಗಾಗುತ್ತಿದೆ ಎಂಬುದು ಕಂಡು ಬಂದಿತು. ಇದರಿಂದಾಗಿ 1ನೇ ಫೆಬ್ರವರಿ 77ರಿಂದ ಈ ತಾಲ್ಲೂಕು ಪೂರ್ಣವಾಗಿ ಅಭಾವ ಪರಿಸ್ಥಿತಿಗೆ ಒಳಗಾಗಿದೆ ಎಂದು ಪರಿಗಣಿಸಲಾಯಿತು. ಅಲ್ಲದೆ ಆ ತಾಲ್ಲೂಕಿನಲ್ಲಿ ರೈತ ಕಾರ್ಮಿಕರಿಗೆ ಕೆಲಸ ಒದಗಿಸಲು ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಈ ಕಾಮಗಾರಿಗಳಿಗಾಗಿ ಮಾರ್ಚ್ ತಿಂಗಳ ಅಂತ್ಯದವರೆಗೆ ರೂ. 2,32, 800-00 ಖರ್ಚು ಮಾಡಲಾಗಿದೆ.

ಈ ತಾಲ್ಲೂಕಿನಲ್ಲಿ ಬೆಳೆಯ ಫಸಲು ಶೇಕಡ 25ರಿಂದ 37ರವರೆಗೆ ಆಗಿರುವ ಅಂದಾಜು ಇರುವುದರಿಂದ ಭೂ ಕಂದಾಯದ ವಸೂಲಿಯನ್ನು ನಿಲ್ಲಿಸಲಾಗಿದೆ

ಈ ವರ್ಷದ ಬೇಳೆಗೆ ಸರಿಯಾಗಿ ಮಳೆಯಾವ ಕಾರಣ ಮುಂಗಾರು ಬೆಳೆಗಳು ಈ ತಾಲ್ಲೂಕಿನಲ್ಲಿ ಉತ್ತಮವಾಗಿರುವ ವಾರ್ತೆ ಬಂದಿದೆ. ಮಳೆಯ ವಿವರ ಹೀಗಿದೆ.

ತಿಂಗಳು	ಸಾಧಾರಣವಾಗಿ ಬರುವ ಮಳೆ.	ಆಗಿರುವ ಮಳೆ
ಏಪ್ರಿಲ್ 77	78 5 ಮಿ.ಮೀ	103 0 ಮಿ.ಮೀ
ಮೇ 77	98.3 ,,	459.2 ,,
ಜೂನ್ 77	65.5 ,,	99.0 ,, (13.6.77ರವರೆಗೆ)

ಈಗ ಪರಿಸ್ಥಿತಿ ತುಂಬಾ ಉತ್ತಮಗೊಂಡಿದೆ, ತಾಲ್ಲೂಕಿನಾದ್ಯಂತ ಬಿತ್ತಣಿಕೆ ಉಳುಮೆ ಮತ್ತು ಗೊಬ್ಬರ ಹಾಕುವ ಕೆಲಸ ಭರದಿಂದ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಆ ತಾಲ್ಲೂಕಿನಲ್ಲಿ ಮುಖ್ಯವಾದಂತಹ ಬೆಳೆ ರಾಗಿ. ರಾಗಿ ಬಿತ್ತನೆ ಮಾಡುವ ಕಾಲ ಬಂದಿದೆ. ಮುಂದೆ ಪರಿಸ್ಥಿತಿ ಕೈಗೆ ಬರುತ್ತದೆಂಬುದನ್ನು ಸರ್ಕಾರ ಗಮನದಲ್ಲಿಟ್ಟು ಕೊಂಡು ತೀರ್ಮಾನ ಮಾಡುತ್ತದೆ.

ಶ್ರೀ ಬೆಟ್ಟಸ್ವಾಮಿಗೌಡ.—ಮಾನ್ಯ ಸಚಿವರು ಈಗಕೊಟ್ಟಿರತಕ್ಕ ಹೇಳಿಕೆಯಕೆಲವು ಅಂಶಗಳನ್ನು ಒಪ್ಪಿಕೊಳ್ಳುತ್ತಾ ನಮ್ಮ ತಾಲ್ಲೂಕಿನಲ್ಲಿ ಹೋದ ವರ್ಷ ಮಳೆ ಬಾರದೆ ತೊಂದರೆಯಾಗಿರುವುದು ತಮಗೆ ಗೊತ್ತಿದೆ. ಆ ಒಂದು ಪರಿಣಾಮದಿಂದ 4 ಆಣೆ ಭಾಗ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಅಂಥಪರಿಸ್ಥಿತಿಯಲ್ಲಿ ಅವರುತಮ್ಮ ಜೀವನ ನಡೆಸುವುದರ ಜೊತೆಗೆಭೂ ಅಭಿವೃದ್ಧಿ ಬ್ಯಾಂಕು